# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 325 (372)**

**ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 13.08.2025**

**ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಆಯಾಯ ವಿಪತ್ತು ಸಂದರ್ಭದಲ್ಲಿ ಎನ್.ಡಿ.ಆರ್.ಎಫ್. ಮೂಲಕ ಗುರುತಿಸಿದ ಅಪಾಯಕಾರಿ ಸನ್ನಿವೇಶಗಳನ್ನು ಸರಿಪಡಿಸುವಿಕೆಗೆ (Mitigation) ಹೇಗೆ ಕ್ರಮವಹಿಸಲಾಗುತ್ತಿದೆ: ಈ ಸಮಸ್ಯೆಗಳು ಪುನರಾವರ್ತನೆಯಾಗದಂತೆ ಅಗತ್ಯ ಕ್ರಮವಹಿಸಲು ಸೂಚಿಸಿದೆಯೇ; | ರಾಜ್ಯದಲ್ಲಿ ವಿಪತ್ತು ಸಂದರ್ಭದಲ್ಲಿ ಎನ್.ಡಿ.ಆರ್.ಎಫ್. ಮೂಲಕ ಗುರುತಿಸಿದ ಹಾಗೂ ಇತರೆ ಅಪಾಯಕಾರಿ ಸನ್ನಿವೇಶಗಳನ್ನು ಸರಿಪಡಿಸುವಿಕೆಗೆ ಈಗಾಗಲೇ ರಾಜ್ಯ ವಿಪತ್ತು ಉಪಶಮನ ನಿಧಿ (SDMF) ರಡಿ ಉಪಶಮನ ಕಾಮಗಾರಿಗಳನ್ನು ಕೈಗೊಳ್ಳಲು ದಿನಾಂಕ: 07.04.2025 ರಂದು ರೂ. 19480.54 ಲಕ್ಷಗಳಲ್ಲಿ ಮತ್ತು ದಿನಾಂಕ: 27.05.2025 ರಂದು ರೂ. 693.91 ಲಕ್ಷಗಳಲ್ಲಿ ಉಪಶಮನ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.<br><br>ಕೊಡಗು, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ರೂ. 7010 ಲಕ್ಷಗಳಲ್ಲಿ ಭೂಕುಸಿತ ತಡೆಗಟ್ಟುವ ಕಾಮಗರಿಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರದಿಂದ NDMF ರಡಿ ಅನುದಾನ ಪಡೆಯಲು ದಿನಾಂಕ: 03.05.2025 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br><br>ಅದಲ್ಲದೇ ರಾಜ್ಯದ ಮಲೆನಾಡು ಮತ್ತು ಕರಾವಳಿ ಜಿಲ್ಲೆಗಳಾದ ಕೊಡಗು, ಚಿಕ್ಕಮಗಳೂರು, ಉಡುಪಿ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ ಹಾಗೂ ಹಾಸನ ಜಿಲ್ಲೆಗಳಲ್ಲಿ ವಿಶೇಷವಾಗಿ ಭೂ ಕುಸಿತ ತಡೆಗಟ್ಟುವ ನಿಟ್ಟಿನಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸಲು, ಮಳೆಯಿಂದ ಹಾನಿಯಾದ ಅಪಾಯಕಾರಿ ಕಾಲುಸಂಕ ಕಾಮಗಾರಿಗಳನ್ನು, ಸಮುದ್ರ ಕೊರೆತವನ್ನು ತಡೆಗಟ್ಟುವ ಸಲುವಾಗಿ ತುರ್ತು ಪ್ರತಿಬಂಧಕ ತಡೆಗೋಡೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು SDMF ರಡಿಯಲ್ಲಿ ಉಪಶಮನ ಕ್ರಿಯಾ ಯೋಜನೆಯನ್ನು ಆದ್ಯತೆ ಮೇರೆಗೆ ತಯಾರಿಸಲಾಗುತ್ತಿದೆ. |
| ಆ. | ದಕ್ಷಿಣ ಕನ್ನಡ ಜಿಲ್ಲೆಯ 1064 ಮನೆಗಳಲ್ಲಿ ವಾಸ ಮಾಡದಂತೆ ಮತ್ತು 180 ಕಾಲುಸಂಕಗಳಲ್ಲಿ ಸಂಚರಿಸದಂತೆ ಎಚ್ಚರಿಕೆ ಸೂಚನೆ ನೀಡಿದ್ದು ಪರ್ಯಾಯ ವ್ಯವಸ್ಥೆಯನ್ನು ಮಾಡಿದೆಯೇ: ಮಾಡದಿದ್ದರೆ ಯಾವಾಗ ಕ್ರಮ-ವಹಿಸಲಾಗುವುದು | ಹವಾಮಾನ ಇಲಾಖೆ ಮುನ್ಸೂಚನೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರ ಮಳೆ/ರೆಡ್ ಅಲರ್ಟ್ ಇರುವ ಸಮಯದಲ್ಲಿ ಪ್ರಾಣ ಹಾನಿ ತಡೆಯುವ ಹಿತದೃಷ್ಟಿಯಿಂದ ಅಪಾಯಕಾರಿ/ ಕುಸಿಯಬಹುದಾದ ಮನೆಗಳಲ್ಲಿ ವಾಸಿಸದಂತೆ ನೋಟೀಸ್ ನೀಡುತ್ತಿದ್ದು, ತುರ್ತು ಸಂದರ್ಭಗಳಲ್ಲಿ ಸಂತ್ರಸ್ಥರನ್ನುಸುರಕ್ಷಿತ ಸ್ಥಳಗಳಿಗೆ/ಕಾಳಜಿ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗುತ್ತದೆ. ಹಾಗೂ ಅಪಾಯಕಾರಿಯಾದ ಕಾಲುಸಂಕಗಳಲ್ಲಿ ಸಂಚರಿಸದಂತೆ ಎಚ್ಚರಿಕೆ ಸೂಚನಾ ಫಲಕಗಳನ್ನು ಹಾಕಲಾಗಿರುತ್ತದೆ. |

<table>
<tr><td></td><td></td><td>ಪ್ರಕೃತಿ ವಿಕೋಪದಿಂದ ಹಾನಿಯಾದ ಮನೆಹಾನಿ ಪ್ರಕರಣಗಳಿಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ: 11.07.2023 ರಂದು ಹೊರಡಿಸಿರುವ SDRF/NDRF ಮಾರ್ಗಸೂಚಿಯಂತೆ ಹಾಗೂ ಸರ್ಕಾರದ ಆದೇಶದಂತೆ ಜಿಲ್ಲಾಧಿಕಾರಿಗಳು ಅವರ ಹಂತದಲ್ಲಿಯೇ ನಿಯಮಾನುಸಾರ ಅರ್ಹತೆಯನುಸಾರ ಅರ್ಹ ಫಲಾನುಭವಿಗಳಿಗೆ ಪರಿಹಾರ ಪಾವತಿ ಮಾಡುತ್ತಾರೆ.<br><br>ಜಿಲ್ಲೆಯಲ್ಲಿ ರಾಜ್ಯ ವಿಪತ್ತು ಉಪಶಮನ ನಿಧಿಯಡಿ ರೂ. 697.50 ಲಕ್ಷಗಳ ಅಂದಾಜು ವೆಚ್ಚದಲ್ಲಿ 19 ಕಾಲುಸಂಕಗಳ ನಿರ್ಮಾಣ ಮತ್ತು ಸೇತುವೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ.</td><td>ಈ 1064 ಅಪಾಯಕಾರಿ ಮನೆಗಳನ್ನು ಪುನರ್ ನಿರ್ಮಿಸಲು ಸರಕಾರ ನೀಡುವ ಅನುದಾನ ರೂ1.50 ಲಕ್ಷ ಅಸಮರ್ಪಕವಾಗಿದ್ದು ಈ ಮನೆಗಳ ಗುರಿಯನ್ನು ವಸತಿ ಯೋಜನೆಗೆ ಒಳಪಡಿಸಲು ಇರುವ ಸಮಸ್ಯೆಗಳೇನು</td><td>ಪ್ರಸಕ್ತ ಸಾಲಿನ ಪೂರ್ವ ಮುಂಗಾರು ಮತ್ತು ಮುಂಗಾರು ಅವಧಿಯಲ್ಲಿ (ಏಪ್ರಿಲ್ 1 ರಿಂದ ಇಲ್ಲಿಯವರೆಗೆ) ಜಿಲ್ಲೆಯಲ್ಲಿ ಒಟ್ಟು 57 ಮನೆಗಳು ಪೂರ್ಣಹಾನಿಯಾಗಿರುತ್ತವೆ. ಸದರಿ ಎಲ್ಲಾ ಮನೆಗಳಿಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ: 11.07.2023 ರಂದು ಹೊರಡಿಸಿರುವ SDRF/NDRF ಮಾರ್ಗಸೂಚಿಯನ್ವಯ ತಲಾ ರೂ. 1.20 ಲಕ್ಷ ಪರಿಹಾರ ಧನ ಜಿಲ್ಲಾಧಿಕಾರಿಗಳ ಹಂತದಲ್ಲಿ ಈಗಾಗಲೇ ಪಾವತಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ 206 ಟಿ ಎನ್ ಆರ್ 2025 29.05.2025 ರಂತೆ ಹೆಚ್ಚುವರಿಯಾಗಿ ದೇವರಾಜ್ ಅರಸು ವಸತಿ ಯೋಜನೆಯಡಿ ಸಾಮಾನ್ಯ ವರ್ಗಗಳಿಗೆ ರೂ. 1.20 ಲಕ್ಷ ಹಾಗೂ ಎಸ್ಸಿ/ ಎಸ್ಟಿ ವರ್ಗಗಳಿಗೆ ರೂ. 1.50 ಲಕ್ಷ ಮಂಜೂರು ಮಾಡಲು ಫಲಾನುಭವಿಗಳ ವಿವರಗಳನ್ನು RGRHCL ತಂತ್ರಾಂಶದಲ್ಲಿ ದಾಖಲಿಸಿ ಜಿಲ್ಲಾಧಿಕಾರಿಗಳು ಪಾವತಿಸುತ್ತಾರೆ.</td></tr>
<tr><td>ಈ.</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ್ರಮವಾಗಿ ರೂಪಾಯಿ 694.00 ಲಕ್ಷಗಳ ಮತ್ತು ರೂಪಾಯಿಗಳ 525.00 ಲಕ್ಷಗಳ ಅಂದಾಜು ವೆಚ್ಚದ ಉಪಶಮನ ಕಾಮಗಾರಿಗಳ ಪ್ರಸ್ತಾವನೆಗಳಲ್ಲಿ ಎಷ್ಟು ಪ್ರಾರಂಭವಾಗಿವೆ: ಉಳಿದವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು: ಅನುಷ್ಠಾನ ಇಲಾಖೆಗಳಾವುವು?</td><td><table>
<tr><th>ಕ್ರ. ಸಂ .</th><th>ಜಿಲ್ಲೆ</th><th>ಕಾಮಗಾರಿಗಳ ಸ್ವರೂಪ</th><th>ಕಾಮಗಾರಿ ಗಳ ಸಂಖ್ಯೆ</th><th>ಕಾಮಗಾರಿ ಗಳ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)</th><th>ಅನುಷ್ಠಾನ ಇಲಾಖೆ</th></tr>
<tr><td>1</td><td>ದಕ್ಷಿಣ ಕನ್ನಡ</td><td>ಕಾಲುಸಂಕ</td><td>15</td><td>502.05</td><td>ಲೋಕೋಪ ಯೋಗಿ ಇಲಾಖೆ</td></tr>
<tr><td></td><td></td><td>ಸೇತುವೆ ನಿರ್ಮಾಣ</td><td>04</td><td>195.00</td><td>ಪಿ.ಆರ್.ಇ.ಡಿ</td></tr>
<tr><td>2</td><td>ಉಡುಪಿ</td><td>ಕಾಲುಸಂಕ</td><td>36</td><td>525.00</td><td>ಲೋಕೋಪ ಯೋಗಿ ಇಲಾಖೆ</td></tr>
</table>ಉಡುಪಿ ಜಿಲ್ಲೆಯಲ್ಲಿ 05 ಕಾಮಗಾರಿಗಳು ಪ್ರಾರಂಭವಾಗಿದ್ದು, ಪ್ರಸ್ತುತ ಮಳೆಗಾಲ ಇರುವುದರಿಂದ ಕಾಮಗಾರಿ ಪ್ರಾರಂಭಿಸಲು/ ಮುಂದುವರೆಸಲು ಅಸಾಧ್ಯವಾಗಿದ್ದು, ಮಳೆಗಾಲ ಮುಗಿದ ನಂತರ ಸದರಿ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಅನುಷ್ಠಾನ ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುತ್ತಾರೆ.</td></tr>
</table>

ಕಡತ ಸಂಖ್ಯೆ:ಕಂಇ 318 ಟಿಎನ್ಆರ್ 2025

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು